ಅಭಿಯಾಚನೆ ಕ್ರಮಾಂಕ—೫೬ ಕ್ರಮಪಡಿಸಿದ ಮಾರುಕಟ್ಟೆಗಳು

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೭,೮೧,೮೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "

ಅಭಿಯಾಚನೆ ಕ್ರಮಾಂಕ—೫೭ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೬೨, ೬೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "

ಅಭಿಯಾಚನೆ ಕ್ರಮಾಂಕ—೫೮ ಸಾಮುದಾಯಿಕ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯,೭೬,೮೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೦೦,೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "

ಅಭಿಯಾಚನೆ ಕ್ರಮಾಂಕ—೫೯ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೦,೭೫,೦೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "

ಅಭಿಯಾಚನೆ ಕ್ರಮಾಂಕ—೬೦ ಗ್ರಾಮೀಣ ಉದ್ಯೋಗ ಯೋಜನೆ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರಕಾರಕ್ಕೆ ಗ್ರಾಮೀಣ ಉದ್ಯೋಗ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ೪೪,೫೨,೪೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದೂ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "

ಪ್ರಶ್ನೋತ್ತರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಗ್ರಾಮೀಣ ವಂಟ್ಟದಲ್ಲಿ ನಡೆಯುವ ಜನ ಸಂಪರ್ಕ ಸಭೆ

೧೧೭೧. ವಿನಯ ಕುಮಾರ್ ಸೊರಕೆ(ಪುತ್ತೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಮಟ್ಟದಲ್ಲಿ ನಡೆಯುವ ಜನ ಸಂಪರ್ಕ ಸಭೆಗಳ ಕಾರ್ಯ ವಿಧಾನದ ವಿಚಾರ

ಆ) ಪುತ್ತೂರು ತಾಲ್ಲೂಕಿನಲ್ಲಿ ನಡೆಯುವ ಜನ ಸಂಪರ್ಕ ಸಭೆಯ ಕಾರ್ಯ ವಿಧಾನದ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಜನ ಸಂಪರ್ಕದ ಅನುಕೂಲತೆ ಸಾಮಾನ್ಯ ಜನರಿಗೆ ತಲುಪುವ ರೀತಿಯಲ್ಲಿ ಸರ್ಕಾರದವರು ಸರಿಯಾದ ಕ್ರಮ ಕೈಗೊಳ್ಳುವರೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

ಅ) ಪ್ರತಿಯೊಬ್ಬ ಜಿಲ್ಲಾಧಿಕಾರಿಗಳೂ, ಉಪ-ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರ್ ರವರು, ತಮ್ಮ ಪ್ರವಾಸ ಕಾಲದಲ್ಲಿ ಗೊತ್ತಾದ ದಿನಗಳಲ್ಲಿ ಗ್ರಾಮಗಳಿಗೆ ಸಂದರ್ಶನ ನೀಡಿ ಗ್ರಾಮಸಭೆ ಗಳನ್ನು ನಡೆಸಬೇಕು. ಈ ರೀತಿ ಗ್ರಾಮ ಸಭೆಗಳನ್ನು ನಡೆಸುವ ಮುನ್ನ ಗ್ರಾಮಕ್ಕೆ ಸಂಬಂಧಿಸಿದ ಪಂಚಾಯಿತಿ ಅಧ್ಯಕ್ಷರ ಅಥವಾ ಕಾರ್ಯದರ್ಶಿಗಳ ಅಥವಾ ಆ ಭಾಗದ ಶಾಸಕರ ಮೂಲಕ ಪ್ರಚಾರ ಪಡಿಸಬೇಕು. ಈ ಸಭೆಗಳಿಗೆ ತಾಲ್ಲೂಕಿನ ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳನ್ನು ಆಮಂತ್ರಿಸಿ ಕರೆದೊಯ್ಯಬೇಕು. ಇಂತಹ ಗ್ರಾಮಸಭೆಗಳಲ್ಲಿ ಆಯಾ ಗ್ರಾಮಗಳಿಗೆ ಸಂಬಂಧಿಸಿದಂತೆ ಎಲ್ಲಾ ಬಾಕಿ ಇರುವ ಕೆಲಸ ಕಾರ್ಯಗಳನ್ನು ಉದಾಹರಣೆಗೆ ;

೧ ಗೋಮಾಳಗಳಿಗೆ ಸಂಬಂಧಿಸಿದ ಅರ್ಜಿಗಳನ್ನು,

೨ ಅನಧಿಕೃತ ಸಾಗುವಳಿ ಸಕ್ರಿಯಗೊಳಿಸುವುದಕ್ಕೆ ಸಂಬಂಧಿಸಿದ ಅರ್ಜಿಗಳನ್ನು,

೩ ದುಂಡು ಭೂಮಿ ಕಾಯ್ದೆಯ ಕೆಳಗಿನ ಅರ್ಜಿಗಳನ್ನು,

೪ ಅಭಾವ ಮತ್ತು ಪ್ರವಾಹ ದುರಂತಗಳಲ್ಲಿ ಪರಿಹಾರ ಕೊಡುವುದಕ್ಕೆ ಸಂಬಂಧಿಸಿದ ಅರ್ಜಿ ಗಳನ್ನು,

೫ ನೀರಾವರಿಗೆ ಸಂಬಂಧಿಸಿದ ಪತ್ರಗಳನ್ನು,

೬ ಹಕ್ಕು ದಾಖಲಾತಿ ಅರ್ಜಿಗಳನ್ನು,

೭ ಸಾಗುವಳಿ ಜಮೀನನ್ನು ಮನೆ ನಿವೇಶನ ಮುಂತಾದುವುಗಳಿಗೆ ಪರಿವರ್ತಿಸುವುದಕ್ಕೆ ಸಂಬಂಧಿಸಿದ ಅರ್ಜಿಗಳನ್ನು,

೮ ವೃದ್ಧಾಪ್ಯ ವೇತನ, ಇತ್ಯಾದಿ, ಇತ್ಯಾದಿ,

ಇವುಗಳನ್ನು ಸ್ಥಳದಲ್ಲಿಯೇ ಸಮಗ್ರವಾಗಿ ಪರಿಶೀಲಿಸಿ ತೀರ್ಮಾನಿಸಬೇಕು.

ಆ) ಇಲ್ಲ.

ಇ) ಹೌದು.

ಶ್ರೀ ವಿನಯ ಕುಮಾರ್ (ಸೊರಕೆ).— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಜನ ಸಂಪರ್ಕ ಸಭೆಗಳ ಕಾರ್ಯ ವಿಧಾನದ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ ಎರಡನೇ ಪ್ರಶ್ನೆಗೆ ಪುತ್ತೂರು ತಾಲ್ಲೂಕಿನಲ್ಲಿ ನಡೆಯುವ ಸಭೆಯ ವಿಧಾನ ತಿಳಿದಿದೆಯೇ ಎಂದರೆ ಇಲ್ಲ ಎಂದಿದ್ದಾರೆ. ಆದರೆ ತಾವು ಹೇಳಿದ ರೀತಿಯಲ್ಲಿ ಅಲ್ಲಿ ಸಭೆಗಳು ನಡೆಯುತ್ತಿಲ್ಲ. ಉದಾಹರಣೆಗೆ ತಾವು ಏನು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೀರಿ, ತಿಂಗಳಿನಲ್ಲಿ ೪ ಸಲ ಸಭೆ ನಡೆಯಬೇಕೆಂದು, ಆದರೆ ಆ ನಿಟ್ಟಿನಲ್ಲಿ ಸರಿಯಾಗಿ ಪ್ರಚಾರ ನಡೆಯಿಸದೆ ಯಾವ ಪ್ರಯೋಜನವೂ ಇಲ್ಲದ ರೀತಿಯಲ್ಲಿ ನಡೆಯುತ್ತಿದೆ. ನಿಮ್ಮ ಸಭೆಗಳ ಉದ್ದೇಶ ಮುಂಬ್ಯಾಣಿ ತಿಳುವಳಿಕೆ ಇಲ್ಲದಂಥ ಹಳ್ಳಿಗರಿಗೆ ಸರ್ಕಾರದ ಪತಿಯಿಂದ ಇರತಕ್ಕಂಥ ತೊಂದರೆ ಗಳನ್ನು ಸ್ಥಳದಲ್ಲೇ ಪರಿಹರಿಸಿಕೊಡುವುದು. ಆದರೆ ಹೀಗೆ ನಡೆಯುತ್ತಿಲ್ಲ. ಆದ್ದರಿಂದ ಸ್ವಲ್ಪ ಮುತುವರ್ಜಿ ತೆಗೆದುಕೊಂಡು ಈ ಸಭೆಗಳನ್ನು ಜನರಿಗೆ ಉಪಯುಕ್ತ ರೀತಿಯಲ್ಲಿ ನಡೆಸಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಅಧಿಕಾರಿ ಗಳೇನಾದರೂ ತಪ್ಪು ಮಾಡಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ, ಸರಿಯಾಗಿ ನಡೆಸುವಂತೆ ಆದೇಶ ಕೊಡುತ್ತೇನೆ.

ಶ್ರೀ ಪಟ್ಟಣಕ್ಕಿ ರತ್ನಾಕರ.— ಈ ಸಂಪರ್ಕ ಸಭೆಗಳನ್ನು ಮುಖ್ಯವಾಗಿ ಹಳ್ಳಿಗರ, ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ತಂದದ್ದು. ಆದರೆ ಏನಾಗಿದೆ ಎಂದರೆ, ಸರ್ಕಾರದ

ಆಹ್ವಾನದ ಮೇಲೆ ಶಾಸಕರೇ ಹೋದರೂ ಕೂಡ ಅಧಿಕಾರಗಳೇ ಬಂದಿರುವುದಿಲ್ಲ. ಬರೀ ನಾವೇ ಹೋಗಿ ಏನು ಮಾಡುವುದು? ಏನು ತೊಡಕಿದೆ, ಹೇಗೆ ಮಾಡಂವುದು ಎಂಬುದನ್ನು ಹೇಳದೇ ಹೋದರೆ ಹೇಗೆ? ಈ ಥರವಾಗಿ ಈ ಸಭೆಗಳು ಅರ್ಥ ಕಳೆದು ಕೊಳ್ಳುತ್ತಿದೆ. ಆದ್ದರಿಂದ ಈ ಬಗ್ಗೆ ಸಮಗ್ರವಾದ ನೀತಿ ನಿಯಮಾವಳಿಯನ್ನು ರೂಪಿಸಿ ಅದರಂತೆ ಅಧಿಕಾರಿಗಳ ಕೈಯಲ್ಲಿ ನೀವು ಕೆಲಸ ಮಾಡಿಸುವುದಾದರೆ ಉದ್ದೇಶವೂ ಈಡೇರಿ, ಜನತೆಗೂ ನಿಮ್ಮ ಬಗ್ಗೆ ಒಳ್ಳೆಯ ಭಾವನೆ ಬಂದು ನಿಮಗೆ ಕೀರ್ತಿಯೂ ಸಿಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ನಿಯಮಾವಳಿ ಮಾಡಿದೆ. ಆದೇಶವನ್ನೂ ಕೊಟ್ಟಿದೆ. ಮೀರಿ ನಡೆದಿರುವ ಅಧಿಕಾರಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆ.

ಬಂಟ್ವಾಳದ ಗುರುಪುರ ಫಿರ್ಕಾದಲ್ಲಿ ವಿದ್ಯುತ್ ಪೂರೈಕೆಯಲ್ಲಾಗಿರುವ ಕಡಿಮೆ ವೋಲ್ಟೇಜ್ ಬಗ್ಗೆ.

೧೧೭೬. ಶ್ರೀ ರಾಮನಾಥ ರೈ (ಬಂಟವಾಳ).—ಮಾನ್ಯ ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಟ್ವಾಳದ ಗುರುಪುರ ಫಿರ್ಕಾದಲ್ಲಿ ವಿದ್ಯುತ್ ಪೂರೈಕೆಯಲ್ಲಾಗಿರುವ ಕಡಿಮೆ ವೋಲ್ಟೇಜ್ ನಿಂದಾಗಿ ಕೃಷಿಗಾರರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಕೃಷಿಗಾರರಿಗೆ ಬೇಕಾಗುವಷ್ಟು ವಿದ್ಯುತ್‌ನ್ನು ಒದಗಿಸುವರೆ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಗಣಿ ಮತ್ತು ಭೂ-ವಿಜ್ಞಾನ ಮಂತ್ರಿಗಳು).—

ಅ) ಬಂಟ್ವಾಳದ ಗುರುಪುರ ಫಿರ್ಕಾದಲ್ಲಿ ಕಡಿಮೆ ವೋಲ್ಟೇಜ್ ಇರುವುದು ನಿಜ. ಗುರುಪುರ ಫಿರ್ಕಾಕ್ಕೆ ಮಂಗಳೂರಿನ ಕಂಲಶೇಖರದಿಂದ ಬರುವ ೧೧ ಕೆ ವಿ. ಗ್ರಾಮೀಣ ಫೀಡರ್ ಸುಮಾರು ೨೬ ಕಿ. ಮೀಟರ್ ಉದ್ದವಾಗಿದ್ದು ಗುರುಪುರ ಫಿರ್ಕಾವು ಈ ಲೈನಿನ ಕೊನೆ ತುದಿಯಲ್ಲಿದೆ. ಈ ಫೀಡರು ತುಂಬಾ ಉದ್ದವಾಗಿರುವುದರಿಂದಲೂ ಗ್ರಾಮೀಣ ಫೀಡರಾದುದರಿಂದ ನೀರಾವರಿ ಪಂಪುಸೆಟ್ಟುಗಳ ಲೋಡ್ ಅಧಿಕವಾಗಿರುವುದರಿಂದಲೂ ವೋಲ್ಟೇಜ್ ಕಡಿಮೆ ಇದೆ.

ಆ) ಪರಿಸ್ಥಿತಿ ಉತ್ತಮಪಡಿಸುವ ಸಲುವಾಗಿ ಈ ಫಿರ್ಕಾಕ್ಕೆ ವಿದ್ಯುತ್ ಸರಬರಾಜನ್ನು ಮಂಗಳೂರು ಬದಲು ಬಂಟ್ವಾಳ ಸ್ಟೇಷನ್‌ನಿಂದ ಕೊಡಲು ಆಲೋಚಿಸಿದ್ದು ಇದಕ್ಕಾಗಿ ಬೇಕಾಗುವ ೪ ಕಿ.ಮೀ. ಲಿಂಕ್ ಲೈನನ್ನು ಹಾಕಲಾಗುತ್ತಿದೆ. ಈಗಾಗಲೇ ೨ ಕಿ.ಮೀ. ಲೈನ್ ಹಾಕಲಾಗಿದ್ದು ಬಾಕಿ ಕೆಲಸ ಇನ್ನು ೩ ತಿಂಗಳೊಳಗೆ ಪೂರೈಸುವ ಗುರಿಯಿದೆ ಇದಾದ ನಂತರ ವೋಲ್ಟೇಜ್ ಸ್ಥಿತಿ ಉತ್ತಮಗೊಳ್ಳುತ್ತದೆ ಪುತ್ತೂರಿನಲ್ಲಿ ಸ್ಥಾಪಿಸುತ್ತಿರುವ ೧೧೦ ಕೆ.ವಿ. ಸ್ಟೇಷನ್ ಆದ ಮೇಲೆ ಪರಿಸ್ಥಿತಿ ಇನ್ನು ಸುಧಾರಿಸುತ್ತದೆ.

ಶ್ರೀ ರಾಮನಾಥ ರೈ.—ನಾನು ಬಂಟ್ವಾಳ ಕ್ಷೇತ್ರದ ಗುರುಪುರ ಫಿರ್ಕಾ ಎಂದು ಕೇಳಿದ್ದೆ. ಆದರೆ ಉತ್ತರದಲ್ಲಿ ಗುರುಪುರ ಫಿರ್ಕಾ ತಾಲ್ಲೂಕು ಎಂದು ತಪ್ಪಾಗಿ ಅಭಿಪ್ರಾಯ ಪಡಲಾಗಿದೆ. ಏಕೆಂದರೆ ಈ ಗುರುಪುರ ಫಿರ್ಕಾ ಮಂಗಳೂರು ತಾಲ್ಲೂಕಿನಲ್ಲಿದೆ, ಆದರೆ ಬಂಟ್ವಾಳ ಕ್ಷೇತ್ರಕ್ಕೆ ಬರುತ್ತದೆ. ಆದ್ದರಿಂದ ಈ ತಪ್ಪು ಅಂಶದ ಮೇಲೆ ನೀವು ಸೂಚಿಸಿರುವ ಕ್ರಮ ಸಮರ್ಪಕ ಸತ್ಯವಲ್ಲ. ಆದ್ದರಿಂದ ಸರಿಯಾದ ಮಾಹಿತಿ ಕೊಡುವಿರಾ?

ಶ್ರೀ ಜೆ.ಎಸ್. ದೇಶಮುಖ್.—(ನಿಶ್ಶಬ್ದ)

ಶ್ರೀ ಯು. ಭೂಪತಿ—ಇವರಿಗೆ ಟೆನ್‌ಷನ್ನೇ ಇಲ್ಲವಲ್ಲ, ಸ್ವಾಮಿ.

ಶ್ರೀ ಜೆ.ಎಸ್. ದೇಶಮುಖ್.— ಆದಷ್ಟು ಬೇಗ ಒದಗಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ರಾಮನಾಥ ರೈ.—ನಾನು ಕೇಳಿದ ವಿವರಣೆ ಅವರಿಗೆ ಅರ್ಥವಾಗಲೇ ಇಲ್ಲ. ಉತ್ತರವನ್ನೂ ಕೊಡಲಿಲ್ಲವಲ್ಲ, ಅಧ್ಯಕ್ಷರೇ.

ಅಧ್ಯಕ್ಷರು.—ನೀವು ಈಗ ಕೂರ್ರಿ, ಆಮೇಲೆ ಅವರ ಪಕ್ಕದಲ್ಲಿ ಹೋಗಿ ಕೂತು ಮಾತನಾಡಿ ಕೆಲಸ ಮಾಡಿಸಿಕೊಳ್ಳಿ.